# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 540 |
| ಸದಸ್ಯರ ಹೆಸರು | ಶ್ರೀ ಡಿ ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 19-07-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಹಡ್ಸನ್ ವೃತ್ತದಲ್ಲಿರುವ ಕೃಷಿ ಭವನದ ಆವರಣದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಶೆಡ್‌ನಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಸಂಬಂಧ ಸಾರ್ವಜನಿಕರು ನೀಡಿರುವ ದೂರುಗಳ ಸಂಖ್ಯೆ ಎಷ್ಟು: (ವಿವರ ನೀಡುವುದು) ನೀಡಿರುವ | ದಿನಾಂಕ:30-06-2021 ರ ಅರ್ಜಿದಾರರ ಮನವಿ ಮೇರೆಗೆ ಕೃಷಿಕ ಸಮಾಜಕ್ಕೆ ಭೇಟಿ ನೀಡುವ ರೈತರ ಹಾಗೂ ಕಟ್ಟಡದಲ್ಲಿರುವ ಕಛೇರಿ ನೌಕರರ ಅನುಕೂಲಕ್ಕಾಗಿ ಕೃಷಿಕ ಸಮಾಜದ ದಿನಾಂಕ: 4-8-2021 ರ ಸ್ಥಿರಾಸ್ತಿ ಉಪ ಸಮಿತಿ ಸಭೆ ನಿರ್ಣಯದಂತೆ ಕೃಷಿ ಭವನದ ಕಾಂಪೌಂಡ್ ಒಳಗೆ ನಂದಿನಿ ಮಿಲ್ಕ್ ಬೂಕ್ ತೆರೆಯಲು ದಿನಾಂಕ :30-11-2021 ರಿಂದ ಅನುಮತಿ ನೀಡಲಾಗಿತ್ತು. ಬೂತ್ ಮಾಲೀಕರು ವ್ಯಾಪಾರ ಪ್ರಾರಂಭಿಸಿದ 2 ದಿನಗಳ ನಂತರ ಕರ್ನಾಟಕ ದಲಿತ ಸಂರಕ್ಷಣಾ ವೇದಿಕೆಯವರು ನೀಡಿರುವ ಮನವಿಯ ಮೇರೆಗೆ ದಿನಾಂಕ:2-3-2022 ರಂದು ಬೆಂಗಳೂರು ಮಹಾನಗರ ಪಾಲಿಕೆಯವರು ಪಾದಚಾರಿಗಳಿಗೆ ಓಡಾಟಕ್ಕೆ ಅನುಕೂಲ ಇರುವುದುದರಿಂದ ತೆರವುಗೊಳಿಸಲು ಸೂಚಿಸಿರುತ್ತಾರೆ. ಇವರ ಸೂಚನೆ ಮೇರೆಗೆ ಅಂದಿನಿಂದ ಬೂತನ್ನು ಮುಚ್ಚಿರುತ್ತದೆ.<br><br>ಬೆಂಗಳೂರು ಮಹಾ ನಗರ ಪಾಲಿಕೆಯವರು ದಿನಾಂಕ:23-5-2022 ರ ನೋಟೀಸ್‌ನಲ್ಲಿ ಕಾಂಪೌಂಡ್ ಗೋಡೆಯನ್ನು ಯಥಾಸ್ಥಿತಿ ನಿರ್ಮಿಸಲು ತಿಳಿಸಿರುತ್ತಾರೆ. ಅವರ ಸೂಚನೆಯಂತೆ ಗೋಡೆಯನ್ನು ಯಥಾಸ್ಥಿತಿ ನಿರ್ಮಿಸಿದ್ದು. ಬಿ.ಬಿ.ಎಂ.ಪಿ. ಟೌನ್ ಪ್ಲಾನ್, ಇವರಿಂದ ಬೂತ್ ಮಾಲೀಕರು ಅನುಮತಿ ಪಡೆಯದೇ ಇರುವುದರಿಂದ ಕೃಷಿಕ ಸಮಾಜವು ದಿನಾಂಕ:5-7-2022 ರ ಪತ್ರದಂತೆ ಅಂಗಡಿಯನ್ನು ಮುಚ್ಚಲು ಆದೇಶಿಸಿರುತ್ತದೆ. ಬಿ.ಬಿ.ಎಂ.ಪಿ ಇವರ ದಿನಾಂಕ:28-11-2023 ಪತ್ರದಂತೆ ಪರವಾನಗಿ ರದ್ದುಪಡಿಸಿರುವುದರಿಂದ ಕೃಷಿಕ ಸಮಾಜವು ದಿನಾಂಕ:8-12-2023 ರ ಪತ್ರದಂತೆ ಬೂತ್ ಮಾಲೀಕರಿಗೆ ತೆರವುಗೊಳಿಸಲು ತಿಳಿಸಲಾಗಿದೆ. ಇಲ್ಲಿಯವರೆಗೂ ಯಾವುದೇ |

| | | |
|---|---|---|
| | | ವಹಿವಾಟು ನಡೆದಿರುವುದಿಲ್ಲ. ಕರ್ನಾಟಕ ಪ್ರದೇಶ ಕೃಷಿಕ ಸಮಾಜಕ್ಕೆ ಬಿ.ಬಿ.ಎಂ.ಪಿ ಇವರ ಪತ್ರಗಳು ಹೊರತುಪಡಿಸಿ ನೇರವಾಗಿ ಯಾವುದೇ ದೂರುಗಳು, ಪತ್ರಗಳು ಬಂದಿರುವುದಿಲ್ಲ. |
| ಆ) | ಈ ಶೆಡ್ಡನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಒಡೆದು ಹಾಕಲು ಸರ್ಕಾರಕ್ಕಿರುವ ತೊಂದರೆ ಏನು ಮತ್ತು ಯಾವಾಗ ಈ ಶೆಡ್ ಒಡೆದು ಹಾಕಲಾಗುವುದು (ವಿವರ ನೀಡುವುದು) | ಸಂಪೂರ್ಣವಾಗಿ ಶೆಡ್ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕಾಂಪೌಂಡ್ ಒಳಗೆ ಇರುತ್ತದೆ. ಇದರಿಂದ ಸಾರ್ವಜನಿಕರಿಗೆ ಯಾವುದೇ ಅಡಚಣೆ ಇರುವುದಿಲ್ಲ.<br>ಬೆಂಗಳೂರು ಮಹಾನಗರ ಪಾಲಿಕೆ ಸೂಚನೆಯಂತೆ ನಿಯಮಾನುಸಾರ ದಿನಾಂಕ:5-7-2022 ರಿಂದ ಮಿಲ್ಕ್ ಬೂತ್ ಮುಚ್ಚಲಾಗಿದ್ದು, ಶೆಡ್ ಮಾಲೀಕರಿಗೆ ತೆರವುಗೊಳಿಸಲು ಸೂಚಿಸಲಾಗಿದೆ. |
| ಇ) | ನಿಯಮ ಉಲ್ಲಂಘಿಸಿ ಶೆಡ್ ನಿರ್ಮಾಣ ಮಾಡಿದವರ ಮೇಲೆ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮಗಳೇನು? (ವಿವರ ನೀಡುವುದು) | |

ಸಂಖ್ಯೆ: AGRI/152/ACT/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು